ಕೊಂಗುವಿಗೆ ತನ್ನನ್ನು ಜೀಪಿನೊಳಗೆ ತಂದು ಈ ಸರಳುಗಳ ಹಿಂದೆ ಯಾಕೆ ಹಾಕಿದರೆಂಬುದಕ್ಕೆ ಕಾರಣವೇ ಗೊತ್ತಾಗಲಿಲ್ಲ.

ಸ್ಮಶಾನದಲ್ಲಿ ಹೂತದ್ದು ಶ್ರೀಮಂತನ ಹೆಣವೇ ಆಗಿಬಿಟ್ಟಿದ್ದರಿಂದ ಮೇಲಿಂದ ಮೇಲೆ ಕೊಂಗುವನ್ನು ಕೈ ಕೋಳದ ಸಮೇತ ತಿರುತಿರುಗಿ ಜೀಪಿನಲ್ಲಿ ಕರೆದುಕೊಂಡು ಬಂದು ಹೆಣ ಹೋದದ್ದು ಹೇಗೆ, ಬಂದಿದ್ದವರು ಯಾರು, ಅವರು ನಿನ್ನ ಭೇಟಿ ಮಾಡಿದ್ದು ಯಾವಾಗ, ಹಣ ಎಷ್ಟು ಕೊಟ್ಟರು, ಅದನ್ನು ಎಲ್ಲಿಟ್ಟಿರುವೆ, ಕರೆಕ್ಟಾ ಚೊಲ್ಲಡಾ, ಸುಳ್ಳು ಬೊಗಳಿದರೆ ಇಲ್ಲೇ ನಿನ್ನ ಸಮಾಧಿ ಕಟ್ಟಲಾಗುವುದು ಎಂದೆಲ್ಲ ತನಿಖೆ ಆರಂಭಿಸಿದರು.

ಕೊಂಗನಿಗಾದರೋ ದುಡ್ಡು ಕಾಸಿನ ಲೆಕ್ಕಾಚಾರವೇ ಗೊತ್ತಿರಲಿಲ್ಲ. ಯಾವತ್ತೋ ಒಂದು ದಿನ ತಿರುಮೊಳಿ ಅಂಗಡಿಗೆ ಹೋಗಿ ಮೂರು ಕಾಸಿನ ಉಪ್ಪು, ಸೊಪ್ಪು ಕೊಂಡು ವಾಡಾ ಅಂದರೆ ಕೊಂಗುವು ಅಂಗಡಿ ಮುಟ್ಟಿ ತಿರುಗಿ ವಾಪಸು ಬಂದು, 'ಅಕ್ಕಾ ನೀನು ಅಂಗಡಿಯಿಂದ ತರಲು ಹೇಳಿದ್ದು ಎಂದ ಮಾದರಿ ಉಪ್ಪು, ಚೊಪ್ಪು ಅದಕ್ಕೆ ಕಾಸು ಎಷ್ಟು, ಅಷ್ಟು ಪಣಂ ಕುಡುತ್ತಿರಿಕ್ಕೆಯಾ' ಅಂದು ಕೇಳಿ ಕೈಯ್ಯಲ್ಲಿರುವುದು ಅದರದೇ ಕಾಸು ಎಂದು ಗ್ಯಾರಂಟಿ ಮಾಡಿಕೊಂಡು ಹೋಗುತ್ತಿದ್ದ.

ಇತ್ತ ತಿರುಮೊಳಿಗೂ ಹೆಣ ಮಾಯವಾದ ಗುಟ್ಟು ಗೊತ್ತಾಗದೆ ಪೊಲೀಸರ ಮುಂದೆ ಬಾಯಿ ಜೋರು ಮಾಡಿ, 'ಸಾರೇ ಕಡವುಳ್ ಸಾಚ್ಚಿಯಾ ನಮಕ್ಕು ಒಣ್ಣು ತೆರಿಯಾದು' ಎಂದಳು. ಆ ನಡುವೆ ವಡಭಾರತದಿಂದ ಅವತ್ತು ತಾನೇ ಬಂದು ಏನೂ ಅರ್ಥವಾಗದೆ ಸ್ಮಶಾನದ ಅರಳಿಕಟ್ಟೆಯ ಬಳಿ ನಿಂತಿದ್ದ ತಂಗಮಣಿಯನ್ನೂ ಬೆದರಿಸಿದ ಪೊಲೀಸರು ಕೊಂಗನಿಗಿಂತ, ಹೆಣಗಳ್ಳತನದಲ್ಲಿ ಈ ಆಸಾಮಿಯದೇ ಬಾರಿ ಕರಾಮತ್ತು ಇರಬೇಕೆಂದು ಕತ್ತಿನಪಟ್ಟಿಗೆ ಕೈ ಹಾಕಿ ಇದೀಗ ಬಲವಾದ ಸಾಕ್ಷಿ ಸಿಕ್ಕಿಬಿಟ್ಟಿತೆಂದು ವ್ಯಾನಿಗೆ ತುರುಕಿಕೊಂಡು ಹೋದರು. ಸಿಂಗನಾದ ತನ್ನ ಯಜಮಾನರೊಡನೆ ವ್ಯಾನು ಏರಲು ಪ್ರಯತ್ನಿಸುವಲ್ಲಿ ಪೊಲೀಸರಿಂದ ನಡುಮುರಿಯುವಂತೆ ಏಟು ಬೀಳಲಾಗಿ ವ್ಯಾನಿನಿಂದ ಕೆಳಕ್ಕೆ ಪಲ್ಟಿ ಹೊಡೆಯಿತು. ಅಷ್ಟಾದರೂ ಸಿಂಗು ನಾಗಾಲೋಟದಲ್ಲಿ ವ್ಯಾನನ್ನು ಹಿಂಬಾಲಿಸಿ ಸ್ಟೇಷನ್ನು ಮುಟ್ಟಿತು. ತಂಗಮಣಿಯೂ, ಕೊಂಗುವೂ ವಾರಾವೊಪ್ಪತ್ತು ಲಾಕಪ್ಪಿನಲ್ಲಿರಲು, ಸಿಂಗು ಅನ್ನ ನೀರು ಮುಟ್ಟದೆ ಪೊಲೀಸಿನವರತ್ತ, ಹಾದಿಬೀದಿಯ ಜನಗಳತ್ತ ಬೊಗಳುತ್ತ, ಧಿಕ್ಕಾರವೆನ್ನುತ್ತ ಸ್ಟೇಷನ್ನಿನ ಮುಂದೆ ಧರಣಿ ಹೂಡಿಬಿಟ್ಟಿತು.

ತಂಗಮಣಿ, ಕೊಂಗು ಲಾಕಪ್ಪಿನಲ್ಲಿರಲು, ಇತ್ತ ಸ್ಮಶಾನಕ್ಕೆ ಹೆಣ ಹೊತ್ತು ತಂದವರು ಸೌದೆ ಹೊಂದಿಸುವವರಿಲ್ಲ, ಗುಂಡಿ ತೋಡುವವರಿಲ್ಲ ಎಂದು ಮುನಿಸಿಪಾಲಿಟಿ ಮುಂದೆ ಗದ್ದಲ ಎಬ್ಬಿಸಿದರು. ಇಷ್ಟಾಗಿ ಶವ ತಂದಲ್ಲಿ ಸೌದೆ ಒಟ್ಟುವುದು, ಗುಂಡಿ ತೋಡುವುದಷ್ಟೇ ಕೊಂಗುವಿನ ಕೆಲಸವಾಗಿರಲಿಲ್ಲ. ಬೆಂಕಿ ಹತ್ತಿ ಉರಿಯುವಾಗಲೋ, ದುಃಖಿತರು ಶವ ಇಟ್ಟ ಸಮಾಧಿಗೆ ಮಣ್ಣು ಕೊಡುವಾಗಲೋ ಅನತಿ ದೂರದಲ್ಲೇ ನಿಂತಿರುತ್ತಿದ್ದ ಕೊಂಗು ಬಲಗೈಯ್ಯಲ್ಲಿ ಶಂಖವಿಟ್ಟು ಊದುತ್ತಿದ್ದ, ಜಾಗಟೆ ಬಾರಿಸುತ್ತಿದ್ದ.

ತಂಗಮಣಿಯೂ ಸ್ಮಶಾನದಲ್ಲಿದ್ದ ದಿನ ಕೊಂಗು ಜಾಗಟೆ ಬಾರಿಸಿದಲ್ಲಿ ತಾನೇ ಶಂಖವನ್ನು ತುಟಿಗಿಟ್ಟು ನಿಧಾನವಾಗಿ ಅದರ ಸದ್ದು ಪೂರೈಸುತ್ತಿದ್ದ. ಆಗ ಅಲ್ಲಿ ನೆರೆದವರ ಮನಸ್ಸಂತೂ ಸತ್ತವರ ಅಗಲಿಕೆಯಿಂದ ಕೊಂಚವಾದರೂ ಸಮಾಧಾನವಾಗುವುದರೊಂದಿಗೆ ದೇವಲೋಕದಿಂದ ದೇವಾನುದೇವತೆಗಳೇ ಬಂದು ತೀರಿಕೊಂಡ ಬಂಧುವಿನ ಕೈ ಹಿಡಿದು ಆಕಾಶದತ್ತ ಕರೆದುಕೊಂಡು ಹೋಗುವಂತೆ ಭಾಸವಾಗುತ್ತಿತ್ತು.

ಜಾಮೀನಿನ ಮೇಲೆ ಕೊಂಗುವನ್ನು ಸ್ಮಶಾನಕ್ಕೆ ಕಳಿಸುವುದೆಂದರೆ ಯಾರದೂ ಜಾಮೀನಿಲ್ಲ. ಕೊಂಗು ಹೆಣ ಎತ್ತಿ ಹಾಕಿರುವುದಕ್ಕೆ ಸರಿಯಾದ ಸಾಕ್ಷಿಯೂ ಸಿಗುತ್ತಿಲ್ಲ. ಹೆಣ ತರುತ್ತಿರುವವರ